ಪಾರ್ವತಿ ಜಗನ್ಮಾತೆ ಎನ್ನುವ ಭಾವ ನಮ್ಮ ಮನಸ್ಸಿಗೆ ಬಂದತಕ್ಷಣ ಕಾವ್ಯವನ್ನು ಅನುಭವಿಸಲು ಸಾಧ್ಯವಾಗುವುದಿಲ್ಲ, ಕಾಳಿದಾಸನ ವರ್ಣನೆ ಅಶ್ಲೀಲ ಎನ್ನಿಸುತ್ತದೆ. ಆ ಕಾರಣದಿಂದಲೇ ಕಾವ್ಯದ ಬಗ್ಗೆ ಅಗೌರವ ಬಹಳ ಒಳ್ಳೆಯದು, ಅದನ್ನು ಪೂಜಿಸಬೇಡ ಎನ್ನುತ್ತಿದ್ದರು ಪು.ತಿ.ನ. ವಿಚಿತ್ರವಾದ ಆಧುನಿಕ ಐಡಿಯಾಗಳನ್ನು ಹೊಂದಿದ್ದ, ಉದಾತ್ತ ಮನೋಭಾವ ಹೊಂದಿದ್ದ ಅವರ ಬದುಕುವ ಕ್ರಮ ಸಾಂಪ್ರದಾಯಿಕವಾಗಿತ್ತು. ಮನೆಗೆ ಯಾರು ಬಂದರೂ ಯಾವ ಜಾತಿಯವರಾದರೂ ಪಕ್ಕದಲ್ಲೇ ಊಟಕ್ಕೆ ಕೂರಿಸಿಕೊಳ್ಳುತ್ತಿದ್ದರು. ಒಮ್ಮೆ ಅವರ ಮೈಸೂರಿನ ಮನೆಗೆ ಮಧ್ಯಾಹ್ನದ ವೇಳೆಗೆ ಹೋಗಿದ್ದೆ. ಅಂದು ಹಬ್ಬದ ದಿನ. 'ಹನ್ನೆರಡು ಗಂಟೆ ಆಯ್ತು, ದೇವರ ಉತ್ಸವ ಬರುತ್ತೆ ಬಾ' ಎಂದು ಪಕ್ಕದ ಬೀದಿಗೆ, ಬರಿಗಾಲಿನಲ್ಲಿ ಓಡಿಕೊಂಡೇ ಹೋದರು. ನಾನು ಅವರ ಹಿಂದೆಹಿಂದೆ. ರಥ ಬರುವ ಬೀದಿಯಲ್ಲಿ, 'ಇಲ್ಲಿಂದ ಚೆನ್ನಾಗಿ ಕಾಣುತ್ತೆ' ಎಂದು ಜಗಲಿ ಹತ್ತಿಸಿದರು. ದೇವರ ದರ್ಶನ ಮಾಡಿಕೊಂಡು ಮನೆಗೆ ಮರಳಿದಾಗ, ಊಟಕ್ಕೆ ಕೂರುವಂತೆ ಹೇಳಿದರು. ಪ್ಯಾಂಟ್ ಹಾಕಿಕೊಂಡಿದ್ದ ನಾನು ಹಿಂಜರಿದಾಗ, 'ಅದೆಲ್ಲ ಇರಲಿ ಕೂತ್ಕೋ. ಒಳಗೆ ಎಲ್ಲರೂ ಬೆತ್ತಲೆಯೇ' ಎಂದು ಒತ್ತಾಯಿಸಿ ಪಕ್ಕದಲ್ಲಿ ಕೂರಿಸಿಕೊಂಡರು. ತುಂಬಾ ನಿರ್ಮಲ ಮನಸ್ಸು ಅವರದು. ಅವರು ದುಃಖಿಸಿದ್ದನ್ನು, ಇನ್ನೊಬ್ಬರನ್ನು ನಿಂದಿಸಿದ್ದನ್ನು ನಾನು ನೋಡಿಯೇ ಇಲ್ಲ. 'ನರಸಿಂಹಸ್ವಾಮಿ ಅವರಿಗೆ ಹೆಂಡತಿ ಬಗ್ಗೆ ಎಷ್ಟು ಪ್ರೀತಿ ಎಂದರೆ, ಅವರ ಕನಸಲ್ಲಿ ಕೂಡ ಹೆಂಡತಿಯೇ ಬರುತ್ತಾರೆ. ಅಲ್ಲಾದರೂ ಬೇರೆಯವರು ಬರಬಾರದೆ?' ಎಂದು ಹೇಳುವಷ್ಟು ವಿನೋದಪ್ರಜ್ಞೆ ಅವರಿಗಿತ್ತು. ಸಾಹಿತ್ಯದ ವಿಷಯಕ್ಕೆ ಬಂದಾಗ ತುಂಬಾ ನಿಷ್ಠುರಿ. 'ನರಸಿಂಹಸ್ವಾಮಿ ಚೆನ್ನಾಗಿ ಬರೆಯುತ್ತಾರಪ್ಪ, ಆದರೆ ವಿಸ್ತಾರ ಇಲ್ಲ. ಅದು ಒಬ್ಬರಿಗೇ ಇರೋದು – ಬೇಂದ್ರೆಯವರಿಗೆ' ಎನ್ನುವಷ್ಟು ನಿಷ್ಠುರತೆ. ನರಸಿಂಹಸ್ವಾಮಿ ಬಗ್ಗೆಯೇ ಹೀಗೆ ಹೇಳುವುದಾದರೆ ಇನ್ನು ಬೇರೆಯವರ ಗತಿಯೇನು?

ನರಸಿಂಹಸ್ವಾಮಿ ಅವರದು ಇನ್ನೊಂದು ಬಗೆ. ಅವರ ಮನೆಗೆ ಹೋದಾಗ, 'ನಿಮ್ಮ ಗುರುಗಳು ಹೇಗಿದ್ದಾರೆ?' ಎಂದು ಕೆಣಕುವಂತೆ ಕೇಳುತ್ತಿದ್ದರು. 'ಅವರಷ್ಟೇ ಅಲ್ಲ, ನೀವೂ ನನಗೆ ಗುರುಗಳೇ' ಎಂದು ಉತ್ತರಿಸಿದರೆ, 'ಅವರು ಪ್ರಿಯವಾದ ಗುರುಗಳು' ಎಂದು ಕುಶಾಲು ಮಾಡುತ್ತಿದ್ದರು. 'ವಯಸ್ಸಾಯಿತಲ್ಲ. ಕಣ್ಣು, ಕಿವಿ ಸುಮಾರು' ಎಂದೊಮ್ಮೆ ಪು.ತಿ.ನ. ಅವರ ಬಗ್ಗೆ ಹೇಳಿದಾಗ, 'ಕಣ್ಣು ಕಿವಿ ಮಾತ್ರವಲ್ಲ, ಮೂಗೂ ಸುಮಾರೆ' ಎಂದಿದ್ದರು. ತಕ್ಷಣಕ್ಕೆ ಅವರ ಮಾತು ಅರ್ಥವಾಗಲಿಲ್ಲ. ಆನಂತರ ಹೊಳೆಯಿತು, 'ಮೈಸೂರ ಮಲ್ಲಿಗೆ' ಸುಮಾರು ಎಂದೊಮ್ಮೆ ಪು.ತಿ.ನ. ಹೇಳಿದ್ದಕ್ಕೆ, ಕೆಎಸ್‌ನ ಅವರ ಪ್ರತಿಕ್ರಿಯೆ ಇದೆನ್ನುವುದು. ಮಲ್ಲಿಗೆಯ ಗಂಧ ತಿಳಿಯಬೇಕಾದರೆ ಮೂಗು ಚುರುಕಾಗಿರಬೇಕಲ್ಲವೆ? ಹೀಗಿದ್ದರು ನಮ್ಮ ಕವಿಗಳು. ಇದೇ ಕೆಎಸ್‌ನ ಇನ್ನೊಮ್ಮೆ – 'ರಾಮಚಂದ್ರ ಶರ್ಮರು ನನಗೆ ತುಂಬಾ ಪ್ರಿಯರು. ಕವಿತೆಯನ್ನು ಅವರು ತಪಸ್ಸು ಎನ್ನುತ್ತಾರೆ. ಆದರೆ ನನಗದರ ಅಡ್ರೆಸ್ ಗೊತ್ತಿಲ್ಲ. ಅವರು ವಿಳಾಸ ಕೊಟ್ಟರೆ ನಾನಲ್ಲಿಗೆ ಹೋಗಿಬರುತ್ತೇನೆ' ಎಂದು ಚಟಾಕಿ ಹಾರಿಸಿದ್ದರು. ದೊಡ್ಡವರ ಜಗಳ ಹೀಗೆ ರುಚಿಕರವಾಗಿರುತ್ತದೆ, ಸ್ವಾರಸ್ಯಕರವಾಗಿರುತ್ತದೆ, ಆ ಜಗಳದಲ್ಲಿ ಅಲ್ಪತನವಿರುವುದಿಲ್ಲ.

◆ **ಕಾವ್ಯದಿಂದಲೇ ಸಾಯುಜ್ಯ ಎಂದು ತಿಳಿದಿದ್ದರೂ, ಕಥೆ, ಕಾದಂಬರಿ, ನಾಟಕ, ಮಕ್ಕಳ ಸಾಹಿತ್ಯ ಎಂದು ಅಲೆದಾಟ ನಡೆಸಿದ್ದೀರಿ. ಈ ತಿರುಗಾಟ ಯಾಕಾಗಿ?**

ಈ ವಿಹಾರ ನಂತರ ಮನೆಗೆ ಹೋಗಿಬಂದ ಹಾಗೆ. ರುಚಿ ಬೇರೆ ಬೇಕೆನಿಸಿದಾಗ ಅತ್ತಿತ್ತ ಹೋಗಿಬಂದರೂ ನಮ್ಮ ಮನೆ ನಮಗೆ ಶಾಶ್ವತ. ನಿತ್ಯ ವಾಸ, ನಿತ್ಯ ಅನುಷ್ಠಾನ ಏನಿದ್ದರೂ ನಮ್ಮ ಮನೆಯಲ್ಲೇ. ನಾವು ಬೇರೆಡೆ ಹೋದಾಗ ಅಥವಾ ನಮ್ಮ ಮನೆಗೆ ಬೇರೆಯವರು ಒಂದಿಷ್ಟು ದಿನ